**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

OS 365/2012 ಡಿಡಬ್ಲ್ಯೂ-1

ದಿನಾಂಕಃ- 10-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರ ಮಾನ್ಯ ಶ್ರೀ.ಬಿಎಜಿ ವಕೀಲರಿಂದಃ-**

ನಾನು ಪ್ರತಿವಾದಿ 7 ರಿಂದ 18 ರವರ ಪರವಾಗಿ ಸಾಕ್ಷಿ ವಿಚಾರಣೆಯನ್ನು ನುಡಿಯುತ್ತಿದ್ದೇನೆ. ಪ್ರತಿವಾದಿ 7 ರಿಂದ 18 ರಲ್ಲಿ 3 ಜನ ಮಾತ್ರ ನನ್ನ ಸಹೋದರರಾಗಿರುತ್ತಾರೆ, ಉಳಿದವರು ನಮ್ಮ ಸಂಬಂಧಿಕರಲ್ಲ. ಪ್ರತಿವಾದಿಗಳು ಬೇರೆ ಬೇರೆ ಜಾಗದಲ್ಲಿ ವಾಸ ಮಾಡಿಕೊಂಡು ಇರುತ್ತಾರೆ. ಸರ್ವೆ ನಂ.24 ರಲ್ಲಿ 3 ಎಕರೆ 30 ಗುಂಟೆ ಜಮೀನು ಇರುತ್ತದೆ. ಅದರ ಚಕ್ಕುಬಂಧಿ ಪೂ-ಕೊತ್ತನಹಳ್ಳಿ ಗ್ರಾಮಸ್ಥರ ಜಮೀನು, ಪ-ಸರ್ವೆ ನಂ.23 ಮತ್ತು 25 ರ ಜಮೀನ, ಉ-ಸರ್ಕಾರಿ ಓಣಿ ಮತ್ತು ರಸ್ತೆ, ದ-ಚಾಮನಹಳ್ಳಿ ಗಡಿ ಇರುತ್ತದೆ. ಇದು ಮೂಲತಃ ತಿಮ್ಮ ಉಃ ಒಡ್ಡ ಬಿನ್ ಕೆಂಪ ರವರ ಹೆಸರಿನಲ್ಲಿತ್ತು. ನಾನು ದಾಖಲೆಗಳನ್ನು ನೋಡಿ ಆ ಬಗ್ಗೆ ಹೇಳುತ್ತಿದ್ದೇನೆ. ನನಗೆ ತಿಳುವಳಿಕೆ ಬಂದಾಗ 2 ಎಕರೆ 17 ಗುಂಟೆ ಜಮೀನನ್ನು 1950 ರಲ್ಲಿ ಸರ್ಕಾರ ಭೂಸ್ವಾದೀನಪಡಿಸಿಕೊಂಡಿರುತ್ತದೆ. ಆ ಬಗ್ಗೆ ಗೆಜೆಟ್ ನೋಟೀಫಿಕೇಶನ್, ನಕ್ಷೆ, ಟಿಪ್ಪಣಿ ಕಾಫಿ ಮತ್ತು ದಾವಾ ಆಸ್ತಿಯಲ್ಲಿ 2 ಎಕರೆ 17 ಗುಂಟೆ, ಮನೆ ಮತ್ತು ನಿವೇಶನ, ಇತ್ತಲು ವಶಪಡಿಸಿಕೊಂಡ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನಗೆ ನ್ಯಾಯಾಲಯದ ಮುಂದೆ ಇರುವ ದಾಖಲೆಗಳು ಈಗ ಅಷ್ಟಾಗಿ ಸ್ಪಷ್ಟವಾಗಿ ಗೊತ್ತಾಗುತ್ತಿಲ್ಲ. ನಾನು ಭೂಸ್ವಾದೀನ ಆಗಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಿಡಿ-16 ಮತ್ತು 17 ರ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳನ್ನು ಸರ್ಕಾರವು ಭೂಸ್ವಾದೀನಪಡಿಸಿಕೊಳ್ಳುವ ಬಗ್ಗೆ ಮಾಹಿತಿ ನೀಡಿರುತ್ತದೆ ಎಂದರೆ ಸರಿಯಲ್ಲ. ನಾವು ಈಗ ಇರುವ ಗ್ರಾಮ ಹೊಸದಾಗಿ ನಿರ್ಮಾಣ ಮಾಡಿರುವ ಗ್ರಾಮವಾಗಿರುತ್ತದೆ. ಈಗ ಹೊಸದಾಗಿ ನಿರ್ಮಾಣ ಮಾಡಿರುವ ಗ್ರಾಮವು ಸರ್ವೆ ನಂ.23, 24, 25 ರಲ್ಲಿ ಇರುತ್ತದೆ. ಆ ಆಸ್ತಿಯಲ್ಲಿ ಚಾಮನಹಳ್ಳಿ ಆಸ್ತಿಗಳು ಇದೆ ಎಂದರೆ ಸರಿ. ಸದರಿ ಆಸ್ತಿಗಳು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಚಾಮನಹಳ್ಳಿ ಗ್ರಾಮದ ಆಸ್ತಿಗಳು ಮೂಲತಃ ರಂಗಸ್ವಾಮಿ ಅಯ್ಯಂಗರ್ ಅಂಡಾಳಮ್ಮ ರವರಿಗೆ ಸೇರಿರುತ್ತದೆ. ಅವರು ಜಮೀನನ್ನು ಬೇರೆ ಬೇರೆ ರೈತರಿಗೆ ಗುತ್ತಿಗೆಗೆ ಕೊಟ್ಟಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸರ್ಕಾರವು ಅವರ ಆಸ್ತಿಗಳನ್ನು ಭೂಸ್ವಾದೀನಪಡಿಸಿಕೊಳ್ಳಲು ಉದ್ದೇಶಿಸಿತ್ತು ಎಂದರೆ ಸರಿ. ಗುತ್ತಿಗೆದಾರರೆಲ್ಲ ದಾವೆ ಹೂಡಲಾಗಿ ಅವುಗಳನ್ನು ಭೂಸ್ವಾದೀಪನಪಡಿಸಿಕೊಳ್ಳಲಿಲ್ಲ ಎಂದರೆ ಸರಿ. ಸರ್ಕಾರ ಸ್ವಾದೀನಕ್ಕೆ ಪಡೆಯುವ

ಮೊದಲೇ ಜನಗಳೇ ಅಲ್ಲಿ ಶೆಡ್ ಗಳನ್ನು ನಿರ್ಮಾಣ ಮಾಡಿಕೊಂಡಿದ್ದರು ಎಂದರೆ  ಸರಿ. ಸರ್ಕಾರವು ಸ್ವಾಧೀನಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸರ್ಕಾರದವರು ವಶಪಡಿಸಿಕೊಂಡಿದ್ದಲ್ಲಿ ಪಂಚಾಯಿತಿ ಮೂಲಕ ಹಂಚುತ್ತಾರೆ ಮತ್ತು ಲೇಹೌಟ್ ಮಾಡುತ್ತಾರೆಂದರೆ ಸಾಕ್ಷಿ ಪಂಚಾಯಿತಿ ಮೂಲಕ ಹಂಚಿರುತ್ತಾರೆಂದು ನುಡಿಯುತ್ತಾರೆ. ಸರ್ಕಾರವು  ಸದರಿ ಆಸ್ತಿಯನ್ನು ವಶಪಡಿಸಿಕೊಂಡು ಪಂಚಾಯಿತಿಗೆ  ನೀಡಿದ್ದ ಬಗ್ಗೆ  ನಾನು ದಾಖಲೆ ಹಾಜರುಪಡಿಸಿಲ್ಲ. ಆ ಬಗ್ಗೆ ನನಗೆ ಗೊತ್ತಿರಲಿಲ್ಲ. ಪಂಚಾಯಿತಿಯವರು ಲೇಹೌಟ್ ಮಾಡಿರುತ್ತಾರೆ. ಪಂಚಾಯಿತಿಯಟವರು ನಮಗೆ ಗ್ರಾಂಟ್ ಸರ್ಟಿಫಿಕೇಟ್ ಕೊಟ್ಟಿಲ್ಲ, ಆದರೆ ಪಂಚಾಯಿತಿಯವರೇ 50*60 ಅಳತೆ ಆಸ್ತಿಗಳನ್ನು ಗಡಿ ಗುರುತು ಮಾಡಿಕೊಟ್ಟಿರುತ್ತಾರೆ. ಆ ಬಗ್ಗೆ ಪಂಚಾಯಿತಿಯಲ್ಲಿ ನಡಾವಳಿಯಾದ ಬಗ್ಗೆ ನನಗೆ ಗೊತ್ತಿಲ್ಲ. ಅಕ್ರಮವಾಗಿ  ಸ್ವಾಧೀನದಲ್ಲಿದ್ದರೆ ಪಂಚಾಯಿತಿಯವರು ಕಂದಾಯ ಪಡೆಯುವ ಕಾರಣದಿಂದ ಖಾತೆ ಮಾಡಿಕೊಡುತ್ತಾರೆಂದರೆ ಸರಿಯಲ್ಲ. ಪಂಚಾಯಿತಿಯವರು ಪ್ರತಿವಾದಿಗಳಿಗೆ ಕಂದಾಯ ಪಡೆಯುವ ಉದ್ದೇಶದಿಂದ ಖಾತೆ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ.

ವಾದಿ ಯಾವ ಕಾರಣಕ್ಕಾಗಿ ದಾವೆ  ಹೂಡಿದ್ದಾರೆಂದು ನನಗೆ ಗೊತ್ತಿಲ್ಲ. ವಾದಿಯು ಈ ದಾವಾ ಆಸ್ತಿಯನ್ನು ಸರ್ಕಾರ ಭೂಸ್ವಾಧೀನಪಡಿಸಿಕೊಂಡಿಲ್ಲ ಎಂದು ದಾವೆ ಹೂಡಿರುತ್ತಾರೆಂದರೆ ಸರಿ. ಈ ದಾವೆ ಹೂಡಿದ ನಂತರವೂ ಸಹ ನಾವು ದಾಖಲೆ ಹುಡುಕಿರುವುದಿಲ್ಲ. ಈ ದಾವೆ ಹೂಡಿದಾಗ ಪಹಣಿಯಲ್ಲಿ ವಾದಿಗಳ ಹೆಸರಿತ್ತು ಎಂದರೆ ಸರಿ. ನಾವು ಊರಿನವರೆಲ್ಲ ಒತ್ತಡ ತಂದು ಸದರಿ ಪಹಣಿಯಲ್ಲಿ ಸರ್ಕಾರ ಎಂದು ಸೇರಿಸಿರುತ್ತೇವೆಂದರೆ ಸರಿ. ವಾದಿಗಳೆಲ್ಲ ಸರ್ಕಾರದ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವಾ ಹೂಡಿದ್ದರು ಎಂದರೆ ಸರಿ. ಆನಂತರ ಹಕ್ಕುಘೋಷಣೆ ದಾವೆ ಹೂಡುವ ಸಲುವಾಗಿ 3 ದಾವೆಗಳನ್ನು ವಾಪಸ್ಸು ಪಡೆದಿರುತ್ತಾರೆಂದರೆ ಸರಿ. ನಮಗೂ ಸಹ ವಕೀಲರ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ಆರ್ ಆರ್ ಮತ್ತು ಇಂಡೆಕ್ಸ್ ದಾಖಲೆಗಳೇ ಈ ದಾವೆಯ ಮೂಲ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳು ತಿಮ್ಮ ಉಃ ಒಡ್ಡ ಬಿನ್ ಕೆಂಪ ರವರ ಹೆಸರಿನಲ್ಲಿತ್ತು ಎಂದರೆ ಸರಿ. ವಾದಿ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿಲ್ಲ. ಭೂಸ್ವಾಧೀನ ಆದರೆ ಭೂಮಾಲೀಕರಿಗೆ ಪರಿಹಾರ ಕೊಡುತ್ತಾರೆಂದರೆ ಸರಿ. ದಾವಾ ಆಸ್ತಿ ಭೂಸ್ವಾಧೀನ ಆಗಿ ಪರಿಹಾರ ಕೊಟ್ಟಿರುವ ಬಗ್ಗೆ ನಾನು ಯಾವುದೇ ದಾಖಲೆ ನೋಡಿಲ್ಲ. ದಾವಾ ಆಸ್ತಿಯನ್ನು

ಭೂಸ್ವಾಧೀನಪಡಿಸಿಕೊಂಡರೆ ಯಾರು ಪರಿಹಾರ ಕೊಡಬೇಕು ಎಂಬ ಬಗ್ಗೆ ಸರ್ಕಾರದ ವ್ಯಾಪ್ತಿಯಲ್ಲಿಯೇ ತಕರಾರು ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

ನಿಪಿ-24 ರಂತೆ ದಾವಾ ಆಸ್ತಿ ಸರ್ಕಾರಕ್ಕೆ ಭೂಸ್ವಾಧೀನ ಆಗಿ ಮಾಲೀಕರಿಗೆ ಪರಿಹಾರ ನೀಡಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪಂಚಾಯಿತಿಗೆ ನೀಡಿದ ಬಗ್ಗೆ ನಮ್ಮಲ್ಲಿ ಯಾವುದೇ ದಾಖಲೆಗಳು ಇಲ್ಲ ಎಂದು ಪಂಚಾಯಿತಿಯವರು ನಿಪಿ-23 ರಂತೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೇಗಳು ಪಂಚಾಯಿತಿಯಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಭೂಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರ ಹಣ ನೀಡದ ಕಾರಣ ಭೂಸ್ವಾಧೀನ ಕೈಬಿಟ್ಟ ಬಗ್ಗೆ ನಿಪಿ-22 ರಲ್ಲಿ ತಿಳಿಸಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಕಟ್ಟಿರುವ ಮನೆಗಳು ಅಕ್ರಮವಾಗಿ ಕಟ್ಟಿರುವ ಮನೆಗಳು ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 18 ರವರಿಗೆ ದಾವಾ ಆಸ್ತಿಯ ಮನೆಗಳಲ್ಲಿ ಇರಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿಯರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ